# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 09-03-2021 ಪ್ರಶ್ನೆ ಸಂಖ್ಯೆ : 726(816)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 09-03-2021

ಉತ್ತರಿಸುವ ಸಚಿವರು: ಮಾನ್ಯ ಸಹಕಾರ ಸಚಿವರು

ವಿಷಯ : ಸಹಕಾರ ಇಲಾಖೆಯಲ್ಲಿ ನಿಯಮ 32 ರಡಿ ನೀಡುತ್ತಿರುವ ಪದೋನ್ನತಿ ಬಗ್ಗೆ

(ಅ) ಸಹಕಾರ ಇಲಾಖೆಯಲ್ಲಿ ನಿಯಮ 32 ರಡಿ ವಿವಿಧ ವೃಂದದ ಅಧಿಕಾರಿಗಳಿಗೆ ಪದೋನ್ನತಿಯನ್ನು ನೀಡಬೇಕಾದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆಯೇ; (ವಿವರ ನೀಡುವುದು)

(ಆ) ಈ ತಹಲ್‌ವರೆವಿಗೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘನೆ ಮಾಡಿ ಯಾವುದೇ ಹುದ್ದೆಗೆ ನಿಯಮ 32 ರಡಿಯಲ್ಲಿ ಪದೋನ್ನತಿಯನ್ನು ನೀಡಲಾಗಿದೆಯೇ; (ವಿವರ ನೀಡುವುದು)

(ಇ) ಇಲಾಖೆಯಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ನಿಯಮ 32 ರಡಿ ಪದೋನ್ನತಿ ನೀಡಿದ್ದು, ನಂತರ ಮುಂದಿನ ಹುದ್ದೆಗೆ ಪದೋನ್ನತಿ ನೀಡುವಾಗ ನಿಯಮ 32 ರಡಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಲಾಗುತ್ತಿದೆಯೇ; (ವಿವರ ನೀಡುವುದು)

(ಈ) ನಿಯಮ 32 ರಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಮುಂದಿನ ಹುದ್ದೆಯ ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಬೇಕೆಂದು ಇಲಾಖೆಯಲ್ಲಿ ರಚಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದೆಯೇ; (ವಿವರ ನೀಡುವುದು)

(ಉ) ಸಿ.ಡಿ.ಒ ಗಳ ಜ್ಯೇಷ್ಠತಾ ಪಟ್ಟಿ ಉಲ್ಲಂಘನೆ ಮಾಡಿ ಎಂ.ಆರ್.ಸಿ.ಎಸ್ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು ಸರ್ಕಾರದ ಹಂತದಲ್ಲಿ ನಿರ್ವಹಿಸಿರುವ ಕಡತ ಸಂಖ್ಯೆ :

ಸಇ/ಎಸಸೇ/336/2016ಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪದೋನ್ನತಿಯಲ್ಲಿ ಅನ್ಯಾಯವಾಗಿರುವ ಅಧಿಕಾರಿಗಳಿಗೆ ನ್ಯಾಯ ಒದಗಿಸಿ ಎಂ.ಆರ್.ಸಿ.ಎಸ್. ಹುದ್ದೆಗೆ ನಿಯಮ 32 ರಡಿ ಪದೋನ್ನತಿ ನೀಡಿರುವುದಿಲ್ಲವೇ? (ಪೂರ್ಣ ವಿವರ ನೀಡುವುದು)